KABK200007282020

# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರ,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

VIJAYAKUMAR KANNUR
Digitally signed by VIJAYAKUMAR KANNUR
Date: 2026.02.13 12:11:04 +0530

ದಿನಾಂಕ: **6** ನೇ ಫೇಬ್ರುವರಿ **2026**

ಅಸಲು ದಾವೆ ನಂ.**129/2020**

ವಾದಿ : **1.** ಶ್ರೀಮತಿ.ಶಿವಕ್ಕ ಉರ್ಫ ಶಿವವ್ವ ಗಂಡ ಯಮನಪ್ಪ ಸಾಗನೂರ,
ವಯಾ: **62** ವರ್ಷ, ಉ: ಒಕ್ಕಲುತನ ಮತ್ತು ಮನೆಗೆಲಸ,
ಸಾ: ವಜ್ಜರಮಟ್ಟಿ, ತಾಃ ಮುಧೋಳ.

(ವಾದಿಯ ಪರ ಶ್ರೀ. ಪಿ.ಎಮ್.ವಿ., ವಕೀಲರು)

- ವಿರುದ್ಧ -

ಪ್ರತಿವಾದಿಯರು : **1.** ಶ್ರೀಮತಿ.ಗಂಗವ್ವ ಗಂಡ ಲಕ್ಷಮಪ್ಪ ಕುರಿ,
ವಯಾ: **85** ವರ್ಷ, ಉ: ಒಕ್ಕಲುತನ ಮತ್ತು ಮನೆಗೆಲಸ,
ಸಾಃ ವಜ್ಜರಮಟ್ಟಿ, ತಾಃ ಮುಧೋಳ.

**2.** ಶ್ರೀ.ಶಿವರಾಯಪ್ಪ ತಂದೆ ಲಕ್ಷ್ಮಪ್ಪ ಕುರಿ,
ವಯಾ: **60** ವರ್ಷ, ಉ: ಒಕ್ಕಲುತನ,
ಸಾಃ ವಜ್ಜರಮಟ್ಟಿ, ತಾಃ ಮುಧೋಳ.

**3.** ಶ್ರೀಮತಿ.ಕಮಲವ್ವ ಗಂಡ ಪಾಂಡಪ್ಪ ಕುರಿ,
ವಯಾ: **55** ವರ್ಷ, ಉ: ಒಕ್ಕಲುತನ,
ಸಾ: ವಜ್ಜರಮಟ್ಟಿ, ತಾ: ಮುಧೋಳ.

**4.** ಶ್ರೀಮತಿ.ಗೀತಾ ಗಂಡ ಗೋಪಾಲ ಸಗನೂರ,
ವಯಾ: **35** ವರ್ಷ, ಉ: ಒಕ್ಕಲುತನ ಮತ್ತು ಮನೆಗೆಲಸ,
ಸಾ: ವಜ್ಜರಮಟ್ಟಿ, ತಾ: ಮುಧೋಳ.

**5.** ಶ್ರೀ.ಬೆನಪ್ಪ ತಂದೆ ಪಾಂಡಪ್ಪ ಕುರಿ,
ವಯಾ: **32** ವರ್ಷ, ಉ: ಪೋಲಿಸಿ,
ಸಾ: ವಜ್ಜರಮಟ್ಟಿ, ತಾ: ಮುಧೋಳ.

**6.** ಶ್ರೀ.ಆನಂದ ತಂದೆ ಪಾಂಡಪ್ಪ ಕುರಿ,
ವಯಾ: **30** ವರ್ಷ, ಉ: ಒಕ್ಕಲುತನ,
ಸಾ: ವಜ್ಜರಮಟ್ಟಿ, ತಾ: ಮುಧೋಳ.

**7.** ಕುಮಾರಿ.ಹೇಮಾ ತಂದೆ ಪಾಂಡಪ್ಪ ಕುರಿ,
ವಯಾ: **28** ವರ್ಷ, ಉ: ಒಕ್ಕಲುತನ ಮತ್ತು ಮನೆಗೆಲಸ,
ಸಾ: ವಜ್ಜರಮಟ್ಟಿ, ತಾ: ಮುಧೋಳ.

**8.** ಶ್ರೀ.ಅಡಿವೆಪ್ಪ ಗಂಡ ಲಕ್ಷ್ಮಪ್ಪ ಕುರಿ,
ವಯಾ: **50** ವರ್ಷ, ಉ: ಒಕ್ಕಲುತನ,
ಸಾ: ವಜ್ಜರಮಟ್ಟಿ, ತಾ: ಮುಧೋಳ,
ಜಿ: ಬಾಲಕೋಟ.

**9.** ಶ್ರೀ.ರವಿ ತಂದೆ ಅಡಿವೆಪ್ಪ ಕುರಿ,
ವಯಾ: **25** ವರ್ಷ, ಉ: ಒಕ್ಕಲುತನ,
ಸಾ: ವಜ್ಜರಮಟ್ಟಿ, ತಾ: ಮುಧೋಳ,
ಜಿ: ಬಾಲಕೋಟ.

**10.** ಶ್ರೀ.ಮಂಜು ತಂದೆ ಅಡಿವೆಪ್ಪ ಕುರಿ,
ವಯಾ: **20** ವರ್ಷ, ಉ: ಒಕ್ಕಲುತನ,
ಸಾ: ವಜ್ಜರಮಟ್ಟಿ, ತಾ: ಮುಧೋಳ,

ಜಿಃ ಬಾಲಕೋಟ.

**11.** ಶ್ರೀ.ಹಣಮಂತ ತಂದೆ ಲಕ್ಷ್ಮಪ್ಪ ಕುರಿ,
ವಯಾ: **48** ವರ್ಷ, ಉ: ಒಕ್ಕಲುತನ,
ಸಾಃ ವಜ್ಜರಮಟ್ಟಿ, ತಾಃ ಮುಧೋಳ,
ಜಿಃ ಬಾಲಕೋಟ.

**12.** ಶ್ರೀ.ರಂಗಪ್ಪ ತಂದೆ ಲಕ್ಷಮಪ್ಪ ಕುರಿ,
ವಯಾ: **45** ವರ್ಷ, ಉ: ಒಕ್ಕಲುತನ,
ಸಾಃ ವಜ್ಜರಮಟ್ಟಿ, ತಾಃ ಮುಧೋಳ,
ಜಿಃ ಬಾಲಕೋಟ.

**13.** ಶ್ರೀ.ರಾಮಪ್ಪ ತಂದೆ ವೆಂಕಪ್ಪ ಗುರಡ್ಡಿ,
ವಯಾ: **60** ವರ್ಷ, ಉ: ಒಕ್ಕಲುತನ,
ಸಾಃ ಮರಕಟ್ಟಿ, ತಾಃ ಮುಧೋಳ,
ಜಿಃ ಬಾಲಕೋಟ.

**13** ಎ. ಶ್ರೀಮತಿ.ಕಸ್ತೂರಿ ಗಂಡ ರಾಮಪ್ಪ ಗುರಡ್ಡಿ,
ವಯಾ: **65** ವರ್ಷ, ಉ: ಮನೆಗೆಲಸ,
ಸಾಃ ವಜ್ಜರಮಟ್ಟಿ, ತಾಃ ಮುಧೋಳ,
ಜಿಃ ಬಾಲಕೋಟ.

**14.** ಶ್ರೀ.ಬಸಪ್ಪ ತಂದೆ ಭೀಮಪ್ಪ ಚೌಡಗನ,
ವಯಾ: **57** ವರ್ಷ, ಉ: ಒಕ್ಕಲುತನ,
ಸಾಃ ವಜ್ಜರಮಟ್ಟಿ, ತಾಃ ಮುಧೋಳ,
ಜಿಃ ಬಾಲಕೋಟ.

**15.** ಶ್ರೀ.ಲಕ್ಷ್ಮಣ ತಂದೆ ಶಿವರಾಯಪ್ಪ ಕುರಿ,
ವಯಾ: **32** ವರ್ಷ, ಉ: ಒಕ್ಕಲುತನ,
ಸಾಃ ಅಂಬೇಡ್ಕರ ಸರ್ಕಲ ಹತ್ತಿರ, ಬೇಳಗಿ,
ತಾಃ ಮುಧೋಳ, ಜಿಃ ಬಾಲಕೋಟ.

**16.** ಶ್ರೀಮತಿ.ಹಣಮವ್ವ ಗಂಡ ಹಣಮಂತ ಕುಳಲಿ,
ವಯಾ: **65** ವರ್ಷ, ಉ: ಒಕ್ಕಲುತನ ಮತ್ತು ಮನೆಗೆಲಸ,
ಸಾ: ಅಂಬೇಡ್ಕರ ಸರ್ಕಲ ಹತ್ತಿರ, ಬೇಳಗಿ,
ತಾ: ಮುಧೋಳ, ಜಿ: ಬಾಲಕೋಟ.

(ಪ್ರತಿವಾದಿ **1, 11, 12** ರ ಪರ ಶ್ರೀ.ಜೆ.ಬಿ.ಎನ್, ವಕೀಲರು)
(ಪ್ರತಿವಾದಿ **2, 8, 9, 10, 15** ರ ಪರ ಶ್ರೀ.ವಿ.ಕೆ.ಎಸ್, ವಕೀಲರು)
(ಪ್ರತಿವಾದಿ **13**(ಎ), **4, 14, 14** ರ ಪರ ಶ್ರೀ.ಆರ್.ಜಿ.ಎನ್. ವಕೀಲರು)
(ಪ್ರತಿವಾದಿ **3, 5** ಮತ್ತು **16** ಏಕತರ್ಫಿಯರಾಗಿರುವರು)

| | | |
|---|---|---|
| i | ಅರ್ಜಿಯನ್ನು ಸಲ್ಲಿಸಿರುವ ನಿಭಂದನೆಗಳು | ದಿವಾಣಿ ಪಕ್ರಿಯಾ ಸಂಹಿತೆ ಕ್ರಮಾದೇಶ **7** ನಿಯಮ **11** ಸಹ ಕಲಂ.**151** ರಡಿಯಲ್ಲಿ |
| ii | ಅರ್ಜಿಯ ಸ್ವರೂಪ | ವಾದ ಪತ್ರವನ್ನು ತಿರಸ್ಕರಿಸುವ ಕುರಿತು. |
| iii | ಅರ್ಜಿಯನ್ನು ದಾಖಲಿಸಿರುವ ದಿನಾಂಕ: | 28.11.2025 |
| iv | ಅರ್ಜಿಯ ಸಂಖ್ಯೆ: | 14 |
| v | ಅರ್ಜಿಯ ಮೇಲಿ ಆದೇಶ ಮಾಡಿದ ದಿನಾಂಕ: | 06-02-2026 |

ಮಧ್ಯಂತರ ಅರ್ಜಿ ಸಂಖ್ಯೆ. **14** ರ ಮೇಲಿನ ಆದೇಶ

ಈ ಮಧ್ಯಂತರ ಅರ್ಜಿ ಸಂಖ್ಯೆ. 14 ಅನ್ನು ಪ್ರತಿವಾದಿ 11 ರ ಪರ ವಕೀಲರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ. 7 ನಿಯಮ 11 ಸಹ ಕಲಂ.151 ರಡಿಯಲ್ಲಿ ಸಲ್ಲಿಸಿ ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಈ ದಾವೆಯು ಕಾಲಪರಿಮಿತ ಅಧಿನಿಯಮದಿಂದ ಪ್ರತಿಷೇದಿತವಾಗಿದ್ದು ಹಾಗೂ ದಾವಾ ಆಸ್ತಿಗಳ ವರ್ಣನೆ ಇರುವುದಿಲ್ಲ ಹಾಗೂ ಈ ದಾವೆಗೆ ಯಾವುದೇ ವಾಜ್ಯಕಾರಣ ಉಂಟಾಗಿರುವುದಿಲ್ಲ ಎಂದು ಹೇಳಿ ವಾದಿಯ ವಾದಪತ್ರವನ್ನು ತಿರಸ್ಕರಿಸುವಂತೆ ವಿನಂತಿಸಿಕೊಂಡಿರುವರು.

**2.** ಈ ಮಧ್ಯಂತರ ಅರ್ಜಿಗೆ ಪ್ರತಿವಾದಿ 11 ರವರು ಪ್ರಮಾಣಪತ್ರ ಸಲ್ಲಿಸಿ, ವಾದಿಯ ದಾವೆಯು ಕಾನೂನಿಂದಾಗಲೀ ಸಂಗತಿಯಿಂದಾಗಲೀ ಊರ್ಜಿತವಾಗಿರುವುದಿಲ್ಲ. ವಾದಿಯ ದಾವೆಯು ಸುಳ್ಳಿನಿಂದ ಕೂಡಿರುತ್ತದೆ. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಮತ್ತು ಸ್ವಾಧೀನಕ್ಕೆ ಕೋರಿ ದಾವೆ ದಾಖಲು ಮಾಡಿದ್ದು, ಈ ದಾವೆಯು ಕಾಲಪರಿಮಿತ ಅಧಿನಿಯಮದಿಂದ ಪ್ರತಿಷೇದಿತವಾಗಿರುವುದು. ವಾದಿಯು ವಾದ ಪತ್ರದಲ್ಲಿ ವರ್ಣಿಸಿರುವ ದಾವಾ ಆಸ್ತಿಗಳು ಕ್ರಮಾದೇಶ 7 ನಿಯಮ 3 ರ ಪ್ರಕಾರ ಸರಿಯಾಗಿ ವಿವರಣೆ ಇರುವುದಿಲ್ಲ ಹಾಗೂ ಈ ದಾವೆಗೆ ಯಾವುದೇ ವಾಜ್ಯ ಕಾರಣ ಉಂಟಾದ ಬಗ್ಗೆ ವಾದ ಪತ್ರದಲ್ಲಿ ಹೇಳಿರುವುದಿಲ್ಲ. ವಾದಿಯು ಸಂದಾಯ ಮಾಡಿರುವ ನ್ಯಾಯಾಲಯದ ಶುಲ್ಕ ಸಮಂಜಸವಾಗಿರುವುದಿಲ್ಲ ಮತ್ತು ದಾವಾ ಆಸ್ತಿಗಳ ಮೌಲ್ಯಮಾಪನ ಸಹ ಸರಿಯಾಗಿ ಮಾಡಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ವಾದಿಯ ವಾದಪತ್ರವನ್ನು ತಿರಸ್ಕರಿಸಬೇಕೆಂದು ವಿನಂತಿಸಿಕೊಂಡಿರುವರು.

**3.** ಸದರಿ ಮಧ್ಯಂತರ ಅರ್ಜಿಗೆ ವಾದಿಯ ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ, ತಮ್ಮ ತಕರಾರಿನಲ್ಲಿ ಮಧ್ಯಂತರ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಕಾನೂನಿಂದಾಗಲೀ ಸಂಗತಿಗಳಿಂದಾಗಲೀ ಊರ್ಜಿತವಾಗಿರುವುದಿಲ್ಲ, ವಾದಿಯು ಈ ದಾವೆಯನ್ನು ಪಾಲು ವಿಭಾಗ ಕೋರಿ ದಾಖಲು ಮಾಡಿರುವರು. ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳು ನಿಜವಿರುವುದಿಲ್ಲ. ಪ್ರತಿವಾದಿ 11 ರವರು ಕಾನೂನಿನ ಸಾಮನ್ಯ ತಿಳುವಳಿಗೆ ಹೊಂದದೆ ಈ ಮಧ್ಯಂತರ ಅರ್ಜಿಯನ್ನು ಸಲ್ಲಿರುವರು. ಈ ಮಧ್ಯಂತರ ಅರ್ಜಿ ಹೇಳಿರುವ ಕಾರಣಗಳು ಸರಿ ಇರುವುದಿಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಕಾನೂನುಬದ್ಧವಾದ ಹಕ್ಕನ್ನು ಹೊಂದಿರುವರು. ಈ ವಾದ ಪತ್ರದಲ್ಲಿ ವಾಜ್ಯಕಾರಣವನ್ನು ಸ್ಪಷ್ಟವಾಗಿ ಹೇಳಿದ್ದು, ಈ

ಗಾಗಲೇ ಈ ದಾವೆಯಲ್ಲಿ ವಿವಾದಂಶಗಳನ್ನು ರಚಿಸಿದ್ದು ಈ ಹಂತದಲ್ಲಿ ಮಧ್ಯಂತರ ಅರ್ಜಿಯು ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

4. ಪ್ರತಿವಾದಿ 11 ರ ಪರ ವಕೀಲರ ಹಾಗೂ ವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು. ಪ್ರತಿವಾದಿ 8 ರವರು ತಮ್ಮ ಲಿಖಿತ ವಾದವನ್ನು ಸಲ್ಲಿಸಿರುವರು.

5. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸುವುವು.

ಅಂಶಗಳು

1. ಮಧ್ಯಂತರ ಅರ್ಜಿ ಸಂಖ್ಯೆ: 14 ನ್ನು ಪುರಸ್ಕರಿಸಲು ಸಾಕಷ್ಟು ಸಮಂಜಸವಾದ ಕಾರಣ ಇರುವುದು ಎಂಬುದನ್ನು ಪ್ರತಿವಾದಿ 11 ರವರು ರುಜುವಾತುಪಡಿಸುವರೇ?

2. ಏನು ಆದೇಶ ?

6. ಮೇಲೆ ಹೇಳಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1: ನಕಾರಾತ್ಮಕವಾಗಿ.
ಅಂಶ 2: ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ.

<u>ಕಾರಣಗಳು</u>

7. <u>ಅಂಶ 1</u> : ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ವಾದಿ ಮತ್ತು ಪ್ರತಿವಾದಿ 1, 2, 8, 11, 12 ಮತ್ತು ಮೃತ ಪಾಂಡಪ್ಪರವರು ಜಂಟಿ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುವರು. ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ

ಶಿವರಾಯಪ್ಪ ಕುರಿ ಇವರು ದಿನಾಂಕ: **03.02.1985** ರಂದು ವಜ್ಜರಮಟ್ಟಿ ಗ್ರಾಮದಲ್ಲಿ ಮೃತಪಟ್ಟಿರುವರು. ಮೃತ ಶಿವರಾಯಪ್ಪ ಇವರಿಗೆ ಪ್ರತಿವಾದಿ **1** ರವರು ಹೆಂಡತಿ, ವಾದಿ ಹಾಗೂ ಪ್ರತಿವಾದಿ **2, 8, 11, 12** ಹಾಗೂ ಮೃತ ಪಾಂಡಪ್ಪ ಇವರು ಮಕ್ಕಳಾಗಿರುವರು. ಪ್ರತಿವಾದಿಯರಿಗೆ ವಾದಿಯು ತನ್ನ ಹಿಸ್ಸೆಯನ್ನು ನೀಡುವಂತೆ ವಿನಂತಿಸಿಕೊಂಡಿದ್ದು ಆದರೆ ಪ್ರತಿವಾದಿಯರು ವಾದಿಯ ವಿನಂತಿಯನ್ನು ನಿರಾಕರಿಸಿರುವರು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಾದ ಪತ್ರದ ಖಂಡಿಕೆ **1** ರಲ್ಲಿ ವಿವರಣೆಯನ್ನು ನೀಡಿರುವರು. ಈ ಆಸ್ತಿಗಳಲ್ಲಿ ವಾದಿಯರು ತಮ್ಮ ಹಿಸ್ಸೆ ನೀಡುವಂತೆ ವಿನಂತಿಸಿದ್ದು ಆದರೆ ಪ್ರತಿವಾದಿಯರು ದಿನಾಂಕ: **05.07.2020** ರಂದು ನಿರಾಕರಿಸಿರುವುದರಿಂದ ಈ ದಾವೆಗೆ ವಾಜ್ಯ ಕಾರಣ ಉಂಟಾಗಿರುವುದಾಗೆಂದು ಹೇಳಿ ಈ ದಾವೆ ದಾಖಲು ಮಾಡಿರುವರು.

**8.** ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶ 11 ನೇ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾಡಿದ ವಾದಪತ್ರದ ತಿರಸ್ಕರಣೆಯು ಒಂದು ಸಿವಿಲ್ ಕ್ರಮವನ್ನು ಪ್ರಾರಂಭದಲ್ಲಿಯೇ ಅಂದರೆ, ದಾವೆಯ ಅಧಿವಿಚಾರಣೆ ನಡೆಸದೆ ಮುಕ್ತಾಯಗೊಳಿಸಲು ನ್ಯಾಯಾಲಯಕ್ಕೆ ಪ್ರದತ್ತವಾದ ತೀವ್ರ ಪರಿಣಾಮದ ಅಧಿಕಾರವಾಗಿದ್ದು, ಸದರಿ ಅಧಿಕಾರವನ್ನು ಚಲಾಯಿಸುವುದಕ್ಕೆ ಮುಂಚಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಅನ್ವಯಿಸತಕ್ಕದ್ದು.

**9.** ಮಾನ್ಯ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳು ವಿಧಿಸಿದ ಕಾನೂನಿನ ಅನುಪಾತದ ದೃಷ್ಟಿಯಿಂದ, ವಾದಪತ್ರವು ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸುತ್ತದೆಯೇ**?** ಅಥವಾ ದಾವೆಯನ್ನು ಯಾವುದೇ ಕಾನೂನಿನಡಿ ಪ್ರತಿಬಂಧಿಸಲಾಗಿದೆಯೇ**?** ಎಂಬುದನ್ನು ತಿಳಿಯಲು, ಒಟ್ಟಾಗಿ ಓದಬೇಕಾಗಿರುವುದು ವಾದಪತ್ರದಲ್ಲಿನ ದೃಢೋಕ್ತಿಗಳನ್ನು ಎನ್ನಲಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶದ 11 ನೇ ನಿಯಮದಡಿಯಲ್ಲಿನ ಅಧಿಕಾರವನ್ನು ಚಲಾಯಿಸುವ ಹಂತದಲ್ಲಿ, ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ

ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ನಿರೂಪಿಸಲಾದ ಪ್ರತಿವಾದಿಯ ವಾದವು ಅಷ್ಟೇನೂ ಮಹತ್ವದ್ದಲ್ಲ. ವಾದಪತ್ರದಲ್ಲಿನ ದೃಢೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ದಾವೆಯು ಯಾವುದೇ ಕಾನೂನಿನಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದಪತ್ರವನ್ನು ತಿರಸ್ಕರಿಸಬಹುದಾಗಿದೆ. ಇಲ್ಲದಿದ್ದಲ್ಲಿ, ಪಕ್ಷಕಾರರ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ.

**10.** ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-7 ನಿಯಮ-11(ಎ), (ಬಿ), (ಡಿ) ಅಡಿಯಲ್ಲಿ ಅಧಿಕಾರ ಚಲಾಯಿಸುವ ಹಂತದಲ್ಲಿ ವಾದಪತ್ರದಲ್ಲಿನ ಧೃಡೋಕ್ತಿಗಳು ಸ್ಪಷ್ಟವಾಗಿ ವ್ಯಾಜ್ಯ ಕಾರಣವನ್ನು ಬಹಿರಂಗಪಡಿಸದಿದ್ದಲ್ಲಿ ಅಥವಾ ವಾದಿಯ ದಾವೆಯು ಯಾವುದೇ ಕಾನೂನಿನ ಅಡಿ ಪ್ರತಿಷೇಧಿತವಾಗುವುದೆಂದು ಕಂಡುಬಂದಲ್ಲಿ ಮಾತ್ರ ವಾದ ಪತ್ರವನ್ನು ತಿರಸ್ಕರಿಸಬಹುದಾಗಿದೆ, ಇಲ್ಲದಿದ್ದಲ್ಲಿ ವಾದವನ್ನು ಅಧಿವಿಚಾರಣೆ ಮಾಡುವ ಮೂಲಕ ನ್ಯಾಯನಿರ್ಣಯ ಮಾಡಬೇಕಾಗುತ್ತದೆ. ಸದರಿ ದಾವೆಯಲ್ಲಿನ ವಾದಪತ್ರವನ್ನು ಪರಿಶೀಲಿಸಲಾಗಿ ವಾದಿಯು ತಮ್ಮ ವಾದಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯರು ಜಂಟಿ ಕುಟುಂಬದ ಸದಸ್ಯರಾಗಿದ್ದು ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳಾಗಿರುವವು ಎಂದು ಹೇಳಿರುವರು.

**11.** ಅದೇರೀತಿ ಪ್ರತಿವಾದಿಯರ ವಾದವೆನೆಂದರೆ ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ನಿರಾಕರಿಸಿ, ಈ ದಾವೆಗೆ ಯಾವುದೇ ವಾಜ್ಯ ಕಾರಣ ಉಂಟಾಗಿರುವುದಿಲ್ಲ. ಈಗಾಗಲೇ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕು ಬದಲಾವಣೆಯಾಗಿದ್ದು ಅವುಗಳನ್ನು ವಾದಿಯರು ಪಶ್ನಿಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ **1** ರಿಂದ **12** ರವರು ಮಿಲಾಪಿಯಾಗಿ ಈ ದಾವೆಗೆ ಯಾವುದೇ ವಾಜ್ಯ ಕಾರಣ ಉಂಟಾಗದೇ ಇದ್ದರೂ ಸಹಿತ ಈ

ದಾವೆಯನ್ನು ದಾಖಲು ಮಾಡಿದ್ದು, ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂಬುದು ಈ ಪ್ರತಿವಾದಿಯರ ವಾದವಾಗಿರುವುದು.

12. ಈ ಮಧ್ಯಂತರ ಅರ್ಜಿ ಸಂಖ್ಯೆ-14 ಕ್ಕೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ದಾವಾ ಆಸ್ತಿಗಳಲ್ಲಿ ಕೆಲವೊಂದು ಆಸ್ತಿಗಳು ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳಾಗಿರುವವು. ಆದ್ದರಿಂದ ಸದರಿ ದಾವಾ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಹೌದೋ ಅಥವಾ ಇಲ್ಲ ಎಂಬುದನ್ನು ನಿರ್ದರಿಸಬೇಕಾಗಿರುವುದು. ಅದೇರೀತಿ ಈ ವಾದ ಪತ್ರದಲ್ಲಿ ಈ ದಾವೆಗೆ ವಾಜ್ಯ ಕಾರಣಕ್ಕೆ ಸಂಬಂಧಪಟ್ಟಂತೆ ಸ್ಪಷ್ಟವಾಗಿ ಹೇಳಿರುವರು. ಆದರೆ ಪ್ರತಿವಾದಿಯರು ಈ ದಾವೆಯನ್ನು ದಾಖಲು ಮಾಡಲು ಯಾವುದೇ ವಾಜ್ಯ ಕಾರಣ ಇರುವುದಿಲ್ಲ ಎಂದು ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವರು ಎಂಬ ಕಾರಣ ಮಾತ್ರಕ್ಕೆ ವಾದಿಯ ದಾವೆಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-7 ನಿಯಮ-11 ಅಡಿಯಲ್ಲಿ ಪ್ರತಿಷೇಧಿತವಾಗಿರುವುದಿಲ್ಲ. ಏಕೆಂದರೆ ವಾದಪತ್ರದಲ್ಲಿನ ಸಂಗತಿಗಳನ್ನು ಪರಿಶೀಲಿಸಿದಾಗ ಮಾತ್ರ ವಾದಿಯ ದಾವೆಯು ಕಾನೂನಿನಡಿಯಲ್ಲಿ ತಿರಸ್ಕರಿಸಲು ಅವಕಾಶ ಇರುವುದು. ಸಿವಿಲ್ ಪ್ರಕ್ರಿಯಾ ಸಂಹಿತೆ 7 ನೇ ಕ್ರಮಾದೇಶದ ನಿಯಮ-11 ನೇ ನಿಯಮದಡಿ ವಾದವನ್ನು ಪರಿಗಣಿಸುವಾಗ, ವಾದಪತ್ರದಲ್ಲಿನ ವಾದವನ್ನು ಪರಿಗಣಿಸುವುದು ನ್ಯಾಯಾಲಯದ ಕರ್ತವ್ಯವಾಗಿದೆ ಎಂಬುವಷ್ಟರ ಮಟ್ಟಿಗೆ ನ್ಯಾಯಾಲಯವು ವಾದ ಪತ್ರದಲ್ಲಿನ ದೃಢೋಕ್ತಿಗಳನ್ನು ಮಾತ್ರ ಪರಿಶೀಲಿಸಬೇಕಾಗುತ್ತದೆಯೆಂದು ಮತ್ತು ಲಿಖಿತ ಹೇಳಿಕೆಯಲ್ಲಿ ಅಥವಾ ವಾದಪತ್ರದ ತಿರಸ್ಕರಣೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳು ಮುಖ್ಯವಲ್ಲವೆಂದು ಹಾಗೂ ಆ ಹಂತದಲ್ಲಿ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿ ಮಂಡಿಸಿದ ಪ್ರತಿವಾದವು ಪೂರ್ತಿ ಅಸಂಗತವಾಗಿರುವುದು. ಆದ್ದರಿಂದ ಅಂಶ ನಂ.1 ಅನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

13. ಅಂಶ 2 : ಈ ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಃ

## ಆದೇಶ

ಪ್ರತಿವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11 ಸಹ ಕಲಂ 151 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 14 ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕ: **6** ನೇ ಫೇಬ್ರುವರಿ **2025** ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು).

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.

VIJAYAKUMAR KANNUR

Digitally signed by VIJAYAKUMAR KANNUR
Date: 2026.02.13 12:11:12 +0530